ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೇ, ಆ ಏರಿಯಾದಲ್ಲಿ ಜನಸಂಖ್ಯೆ ಕಡಿಮೆ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನ ಇರುವ ಕಡೆ ಮಾಡಿ ಎಂದು ನಾವು ಕೇಳುತ್ತಿದ್ದೇವೆ. ಪ್ರಾರಂಭ ಮಾಡಿಲ್ಲವಲ್ಲಾ ಅವರು. ಈಗಲಾದರೂ ಆದೇಶ ಮಾಡಲಿ. ಎಷ್ಟು ವರ್ಷ ಎಂದು ನಾವು ಕಾಯುವುದಕ್ಕೆ ಆಗುತ್ತದೆ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಜಿಲ್ಲಾ ಮಟ್ಟದಲ್ಲಿ ಪರೀಕ್ಷೆ ನಡೆಯುತ್ತಿದೆ. ಇದು ಒಂದು ಏರಿಯಾಗೆ ಸಂಬಂಧಪಟ್ಟಿದ್ದು ಅಲ್ಲ. ಇಡೀ ಜಿಲ್ಲೆಯಲ್ಲಿ ಪರೀಕ್ಷೆ ನಡೆದಾಗ ಎಲ್ಲಾ ಭಾಗಗಳಿಂದ ಬರತಕ್ಕಂಥ ವಿದ್ಯಾರ್ಥಿಗಳು ಅಲ್ಲಿ ಸೇರಬಹುದು.

ಆನೇಕಲ್ ನಗರದಲ್ಲಿ ಕುಡಿಯುವ ನೀರಿನ ಯೋಜನೆ

415 - ಶ್ರೀ ಎ. ನಾರಾಯಣ ಸ್ವಾಮಿ (ಆನೇಕಲ್) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆನೇಕಲ್ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆನೇಕಲ್ ನಗರಕ್ಕೆ ಕಾವೇರಿ ಅಥವಾ ಮುತ್ಯಾಲ ಮಡುವಿನಿಂದ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ತರಲಾಗುವುದೆಂದು ಸರ್ಕಾರದ ಭರವಸೆ ನೀಡಿರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಮುತ್ಯಾಲ ಮಡುವಿನಿಂದ ಆನೇಕಲ್ ನಗರಕ್ಕೆ ನೀರು ಸರಬರಾಜು ಮಾಡಲು ಯೋಜಿಸಲಾಗಿದೆ.

ಇ) ಆನೇಕಲ್ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರು ಒದಗಿಸಲು ಮುತ್ಯಾಲ ಮಡುವನ್ನು ಮೂಲವಾಗಿ ಇಟ್ಟುಕೊಂಡು ಒಂದು ಯೋಜನೆಯನ್ನು ರೂ.500.00 ಲಕ್ಷಗಳಿಗೆ ತಯಾರಿಸಿದ್ದು ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ಆನೇಕಲ್ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ನನಗೆ ಉತ್ತರ ಬಂದಿದೆ. ಮುತ್ಯಾಲು ಮಡುವಿನಿಂದ ಆನೇಕಲ್ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡಲು ಯೋಜನೆಯನ್ನು

ಮಾಡಲಾಗಿದೆ, ಮತ್ತು 500 ಲಕ್ಷ ರೂಪಾಯಿಗಳ ಯೋಜನೆಯನ್ನು ತಯಾರು ಮಾಡಲಾಗಿದೆ ಎಂದು ನನಗೆ ಉತ್ತರ ಬಂದಿದೆ. ಆನೇಕಲ್ ನಗರದ ಜನತೆಯಲ್ಲಿ ಒಂದು ಆಂಧೋಲನ ಶುರುವಾಗಿದೆ. ನಮ್ಮ ಮಾನ್ಯ ಮಂತ್ರಿಗಳು ದಿನಾಂಕ 30-1-97ರಲ್ಲಿ ಆನೇಕಲ್ ನಗರಕ್ಕೆ ಆಗಮಿಸಿದಾಗ ಕಾವೇರಿ ನದಿ ನೀರನ್ನು ಕೊಡುತ್ತೇನೆಂದು ಹೇಳಿದ್ದರು. ಜೊತೆಗೆ ಮಾನ್ಯ ಮುಖ್ಯಮಂತ್ರಿಗಳೂ ಸಹ ಆನೇಕಲ್ ನಗರಕ್ಕೆ ಆಗಮಿಸಿದಾಗ ಕಾವೇರಿ ನದಿ ನೀರನ್ನು ಕೊಡುತ್ತೇವೆಂದು ಹೇಳಿದ್ದರು. ಇಲ್ಲಿ ಕಾವೇರಿ ನದಿ ನೀರನ್ನು ಕೊಡುತ್ತೇವೆಂದು ಒಂದು ಕಡೆ ಹೇಳುತ್ತಿದ್ದಾರೆ. ಇಲ್ಲಿ ನನಗೆ ಕೊಟ್ಟಿರುವ ಉತ್ತರದಲ್ಲಿ ಮುತ್ಯಾಲ ಮಡುವಿನಿಂದ ನೀರನ್ನು ಕೊಡುತ್ತೇವೆಂದು ಒಂದು ಕಡೆ ಹೇಳುತ್ತಿದ್ದಾರೆ. ಮತ್ತು ಅಲ್ಲಿನ ಜಲಮಂಡಲಿಯ ಅಧಿಕಾರಿಗಳು ಅಗ್ರಹಾರದಿಂದ ನಿಮಗೆ ನೀರನ್ನು ಕೊಡುತ್ತೇವೆಂದು ಒಂದು ಕಡೆ ಹೇಳುತ್ತಿದ್ದಾರೆ. ಆನೇಕಲ್ ನಗರದಲ್ಲಿ ಸುಮಾರು 40 ಸಾವಿರ ಜನಸಂಖ್ಯೆ ಇದೆ. ಸರ್ಕಾರಿ ಆದೇಶಗಳ ಪ್ರಕಾರ ಮತ್ತು ವರದಿಗಳ ಪ್ರಕಾರ ಪ್ರತಿ ಮನುಷ್ಯನಿಗೆ ಪ್ರತಿದಿವಸ 7 ಗ್ಯಾಲನ್ ನೀರಿನ ಅವಶ್ಯಕತೆ ಇದೆ. ಅಂತರ್‌ಜಲ ಮಟ್ಟ ಕೆಳಗೆ ಹೋಗಿ ಯಾವುದೇ ಬೋರ್‌ವೆಲ್‌ಗಳಲ್ಲಿ ನೀರು ಇಲ್ಲದಂತೆ ಆಗಿದೆ. ಕುಡಿಯುವ ನೀರಿಗೆ ಬಹಳ ಆಹಾಕಾರ ಇದೆ. ಸರ್ಕಾರ ದಯವಿಟ್ಟು ಯಾವಾಗ ಮಾಡುತ್ತೀರಿ. ಯಾವ ಯೋಜನೆಯನ್ನು ಮಾಡುತ್ತೀರಿ? ಮುತ್ಯಾಲುಮಡುವು ಯೋಜನೆಯನ್ನು ಮಾಡುತ್ತೀರಾ ಅಥವಾ ಕಾವೇರಿ ನದಿ ನೀರನ್ನು ಕೊಡುತ್ತೀರಾ ಅಥವಾ ಅಗ್ರಹಾರ ಕೆರೆಯಿಂದ ನೀರನ್ನು ಕೊಡುತ್ತೀರಾ? ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆನೇಕಲ್ ನಗರದ ಮಧ್ಯೆ ಕಾವೇರಿ ನದಿ ನೀರು ಹರಿದು ಕೈಗಾರಿಕಾ ಪ್ರದೇಶಕ್ಕೆ ಹೋಗುತ್ತಿದೆ. ತಾವು ದಯವಿಟ್ಟು ಯಾವುದಾದರೂ ಒಂದು ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಆನೇಕಲ್ ಪಟ್ಟಣಕೆ ಬೋರ್‌ವೆಲ್ ಮೂಲಕ ಕುಡಿಯುವ ನೀರು ಸಾಕಾಗುತ್ತಿಲ್ಲ. ಅಲ್ಲಿನ ಪ್ರಜಾಸಂಖ್ಯೆ ಸುಮಾರು 35 ಸಾವಿರ ಇದೆ. ಸಮಗ್ರವಾದ ಕುಡಿಯುವ ನೀರಿನ ಯೋಜನೆಯನ್ನು ಮಾಡಬೇಕೆಂದು ಹೇಳಿ ರಿಮೋಟ್ ಸೆನ್ಸಿಂಗ್ ಮೂಲಕ ಅಗ್ರಹಾರದಿಂದ ಹಾಕಿದ್ದೇವೆ ಸ್ವಾಮಿ. ಅದಕ್ಕೆ ಸುಮಾರು 300 ಲಕ್ಷ ರೂಪಾಯಿಗಳಿಗೆ ಒಂದು ಪ್ರಾವಿಷನ್ ಮಾಡಿದ್ದೇವೆ. ಅದು ಆಗುವುದಿಲ್ಲ ಎಂದು ಆದ ಮೇಲೆ ಮುತ್ಯಾಲು ಮೊಡವಿಗೆ ಒಂದು ಬ್ಯಾರೇಜ್ ಹಾಕಿ ನೀರನ್ನು ಅಲ್ಲಿ ನಿಲ್ಲಿಸಿ ಆ ಮೂಲಕ ಕೊಡುವಂತಹ ಯೋಜನೆಗೆ 500 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ಹಿಂದೆ ಇದ್ದ ಸದಸ್ಯರಾದ ಮಾನ್ಯ ದಿವಂಗತ ವೈ. ರಾಮಕೃಷ್ಣರವರು ಇದ್ದಾಗ ಇಂಡಸ್ಟ್ರೀಯಲ್ ಟೌನ್‌ಗೆ ನೀರು ಹೋಗುತ್ತದೆ ಅಲ್ಲಿಂದ ಕಾವೇರಿ ನದಿ ನೀರನ್ನು ಕೊಡಬೇಕೆಂದು ಹೇಳಿದರು. ಅದು ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ನಾರಾಯಣಸ್ವಾಮಿಯವರಿಗೆ ಗೊತ್ತಿರಬಹುದು. ನಮ್ಮ ಬಿ ಡಬ್ಲ್ಯೂ ಎಸ್ ಎಸ್ ಬಿ ವತಿಯಿಂದ ಅದನ್ನು ಮಾಡಿದರೆ ಬಹಳ ಕಾಸ್ಟ್ ಆಗುತ್ತದೆ. ತಮ್ಮ ಏರಿಯಾದಲ್ಲಿ ಆ ತರಹ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇವತ್ತು ಅಗ್ರಾಹಾರದಲ್ಲಿ ಆಗುವಂತಹ ವಿಷಯ ಮತ್ತು ಮುತ್ಯಾಲ ಮಡುವಿನಲ್ಲಿ ಆಗುವಂತಾದ್ದು ಇದರಲ್ಲಿ ಯಾವುದು ಸರಿ ಎನ್ನುವಂತಾದ್ದನ್ನು ನಾವು ನೀವು ಕುಳಿತುಕೊಂಡು ಮಾತನಾಡೋಣ. ಅದನ್ನು ಹೋಗಿ ನೋಡಿ ಸಳ ಪರೀಕೆ ಮಾಡಿ ಮಾಡುವಂತಾದ್ದು. ಕಾವೇರಿ ನದಿ ನೀರನ್ನು ಕೊಡುವ ಬಗ್ಗೆ ಮಾನ್ಯ

ವೈ. ರಾಮಕೃಷ್ಣರವರು ವೇದಿಕೆ ಮೇಲೆ ಸಲಹೆ ಮಾಡಿದರು. ಕಾವೇರಿ ನದಿ ನೀರು ಇಲ್ಲಿಯವರೆಗೂ ಬಂದಿದೆ. ಅದನ್ನು ಪೈಪ್‌ನಲ್ಲಿ ತೆಗೆದುಕೊಂಡುಬಿಡಿ ಎಂದು. ಅದನ್ನು ನಾವು ವಿಚಾರಿಸಿದಾಗ ಬಹಳಷ್ಟು ಕಾಸ್ಟ್ ಬರುತ್ತದೆ. ನಾವು ಗ್ರಾಹಕರಿಂದ ಮೀಟರ್ ಮೇಲೆ ಹೆಚ್ಚು ಹಣವನ್ನು ವಸೂಲಿ ಮಾಡಬೇಕಾಗುತ್ತದೆ ಬೆಂಗಳೂರಿನಲ್ಲಿ ಮಾಡಿದಂತೆ ನಮ್ಮ ಪಟ್ಟಣಗಳಲ್ಲಿ ಆ ಹಣವನ್ನು ಕೊಡುವುದಿಲ್ಲ. ಪುರಸಭೆಗಳ ಮಟ್ಟದಲ್ಲಿ ಸಹ ಕೊಡುವುದಿಲ್ಲ. ಅದಕ್ಕೋಸ್ಕರ ಅವರು ನಿಲ್ಲಿಸಿಬಿಡುತ್ತಾರೆ. ಇಲ್ಲಿ ನಾವು ಇಲ್ಲಿ ನಡೆಸಿಕೊಂಡಂತೆ ಅಲ್ಲಿ ಅವರು ನಡೆಸಿಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ನಾರಾಯಣಸ್ವಾಮಿಯವರು ಹೊಸದಾಗಿ ಬಂದಿದ್ದಾರೆ. ಅವರು ನಾವು ಕುಳಿತುಕೊಂಡು ಮುತ್ಕಾಲಮೊಡವಿನಲ್ಲಿ ಆಗಬಹುದು ಅಥವಾ ಬೇರೆ ಕಡೆ ಆಗಬಹುದು. ಅವರು ಕೇಳುವಂತಾದ್ದು ಬಹಳ ಮುಖ್ಯವಾಗಿ ಈಗ ನಾವು 98-99ರಲ್ಲಿ ಮಂಜೂರಾತಿ ಮಾಡಿ ಇದನ್ನು ತೆಗೆದುಕೊಳ್ಳುತ್ತೇವೆ. ಅದು ತಮಗೆ ಬೇಕಾಗಿರತಕ್ಕಂಥ ಮುಖ್ಯವಾದ ಆಶ್ವಾಸನೆ. ಪದೇ ಪದೇ ನಾವು ಹೇಳಿದ್ದೇವೆ ನಾವು ಮಾಡುತ್ತೇವೆ ಎಂದು ಹೇಳಿ. ಆ ದೃಷ್ಟಿಯಿಂದ ಬಜೆಟ್ ಪ್ರಾವಿಷನ್ ಮಾಡಿ ಈ ಯೋಜನೆಯಲ್ಲಿ ಅಗ್ರದಲ್ಲಿ ರಿಮೋಟ್ ಸೆನ್ಸಿಂಗ್ ಬೋರ್‌ವೆಲ್ ಹಾಕಬೇಕು ಎಂದಾಗಲಿ ಅಥವಾ ಶಾಶ್ವತವಾಗಿ ಮುತ್ಕಾಲ ಮೊಡವಿನಲ್ಲಿ ನೀರು ನಿಲ್ಲಿಸಿ ಬ್ಯಾರೇಜ್ ಹಾಕಿ ಕೊಡುವುದರ ಮೂಲಕ ನಾವು ಇಬ್ಬರೂ ಮಾತನಾಡಿ ತೀರ್ಮಾನ ತೆಗೆದುಕೊಳ್ಳೋಣ. ಈ ವರ್ಷ ಆ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೇ, ತಾವು ಪತ್ರಿಕೆಯಲ್ಲಿ ನೋಡಿರಬಹುದು. ಕುಲ್ಬರ್ಗಿಯಲ್ಲಿ ಹಿಂದಿನ ಅಧಿವೇಶನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಅದು ಪೂರೈಸಿಲ್ಲ ಅಂತ ಹೇಳಿ, ಆ ಒಂದು ಕಲ್ಪನೆ ಇರಬಾರದು.

ಅಧ್ಯಕ್ಷರು : ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಆ ರೀತಿ ಆಗುವುದಿಲ್ಲ ಬಿಡಿ.

ಅಧ್ಯಕ್ಷರು : ತಾವು ಕಳುಹಿಸಿರುವ ಪ್ರಶ್ನೆ ಸಂಖ್ಯೆ : 416 (2895)ಕ್ಕೆ ಮಂತ್ರಿಗಳು ಬದಲಾವಣೆ ಆಗಿದ್ದಾರೆ. ಈ ವಿಷಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಬರುತ್ತದೆ.

ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಅಧ್ಯಕ್ಷರೇ, ನಾನು ಕಳೆದ ಬಾರಿ ಈ ಪ್ರಶ್ನೆಯನ್ನು ಕೇಳಿದಾಗ ಮಾನ್ಯ ನಾಣಯ್ಯನವರು ಉತ್ತರ ಕೊಟ್ಟಿದ್ದರು. 1-4-98ರಿಂದ ಇದನ್ನು ನಾವು ಕಾರ್ಯರೂಪಕ್ಕೆ ತರುತ್ತೇವೆ ಮತ್ತೆ.

ಅಧ್ಯಕ್ಷರು : ಮಾನ್ಯ ನಾಣಯ್ಯನವರು ಸಂಸದೀಯ ವ್ಯವಹಾರಗಳ ಸಚಿವರು. ಈ ಸದನದಲ್ಲಿ ಯಾರೇ ಪ್ರಶ್ನೆ ಕೇಳಿದರೂ ಅದಕ್ಕೆ ಉತ್ತರ ಕೊಡತಕ್ಕಂಥಾದ್ದು ಒಂದು ಪದ್ಧತಿ. ಈಗ ಒಂದು ವಿಚಿತವಾದ ಪ್ರಶ್ನೆ ಪ್ರಶ್ನೋತ್ತರ ವೇಳೆಯಲ್ಲಿ ಬಂದಿರುವುದರಿಂದ ಅವರೇ ಉತ್ತರ ಹೇಳಬೇಕಾಗುತ್ತದೆ.

ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರೂ ಕೂಡ ನಮ್ಮ ಡೆಫ್ ಅಂಡ್ ಡಂಬ್ ಸ್ಕೂಲಿಗೆ ಬಂದಿದ್ದರು. ಆ ಕುರುಡು ಮಕ್ಕಳು ವಿನಂತಿ ಮಾಡಿದರು. ನೂರು ರೂಪಾಯಿ ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದೀರಿ ಆದರೆ ನಮಗೆ ಒಂದು ವರ್ಷದಿಂದಲೂ 75

ರೂಪಾಯಿ ಕೊಡುತ್ತಿದ್ದಾರೆ. ನಾವು ಕುರುಡರು ನಮಗೆ ತಕ್ಷಣ ಕೊಡಿ ಎಂದು ವಿನಂತಿ ಮಾಡಿದರು. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಬಜೆಟ್ ಪುಸ್ತಕದಲ್ಲಿ ಪ್ರಿಂಟ್ ಮಾಡಿ ಕೊಡಲಿಲ್ಲ ಅಂದರೆ ಹೇಗೆ? ಹಣ ಇಲ್ಲದಿದ್ದರೆ ಬಜೆಟ್ ಪುಸ್ತಕದಲ್ಲಿ ಹೇಗೆ ಪ್ರಸ್ತಾಪ ಮಾಡುತ್ತಾರೆ. ಸುಳ್ಳು ಸುಳ್ಳು ಏಕೆ ಬಜೆಟ್ ಪುಸ್ತಕದಲ್ಲಿ ಮುದ್ರಣ ಮಾಡುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಅವರು ಕೇಳಿರತಕ್ಕಂಥ ಪ್ರಶ್ನೆ ನಿಜ. ಸರ್ಕಾರ 1-4-98ರಿಂದ 75 ರೂಪಾಯಿ ಇರತಕ್ಕಂಥಾದ್ದನ್ನು ನೂರು ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಹೇಳಿರುವುದು ಸಹ ನಿಜ. ಮತ್ತು ಇದಕ್ಕೆ ಸರ್ಕಾರಿ ಆದೇಶ ನಾವು ಇಷ್ಯೂ ಮಾಡುತ್ತಿದ್ದೇವೆ. ಇವರಿಗೆ ಮಾತ್ರ ನೂರು ರೂಪಾಯಿ ಕೊಡುವುದು ಅಲ್ಲ. ಅಂಗವಿಕಲರು ಯಾರು ಇದ್ದಾಗೆ ಅವರೆಲ್ಲರಿಗೂ ಸಂಬಂಧಪಟ್ಟಂತೆ ನಾವು ಈ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದ್ದೇವೆ. ಅವರಿಗೆ ನಾವು ಬಾಕಿ ಹಣವನ್ನೂ ಸಹ ಕೊಡುತ್ತಿದ್ದೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಅಧ್ಯಕ್ಷರೇ, ಸರ್ಕಾರ 97ರ ಬಜೆಟ್‌ನಲ್ಲಿ ಮುದ್ರಣ ಮಾಡಿದೆ. ತಾವು 1-4-98 ರಿಂದ ಕೊಡುವುದಾದರೆ ಹೇಗೆ? ಒಂದು ವರ್ಷದ ಬಾಕಿಯನ್ನು ಕೊಡಬೇಕಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ ನಾವು ಇದನ್ನು ಬಜೆಟ್‌ನಲ್ಲಿ ಹೇಳಿದ್ದೇವೆ. 1-4-98ರಿಂದ ನಾವು ಈ ಕಾರ್ಯಕ್ರಮವನ್ನು ಜಾರಿಗೆ ತರುತ್ತೇವೆ ಎಂದು. 1996-97ನೇ ಸಾಲಿನ ಬಾಕಿಯನ್ನು ಕೊಡುವುದಕ್ಕೆ ಸರ್ಕಾರ ತಾತ್ವಿಕವಾಗಿ ಒಪ್ಪಿಲ್ಲ. 1998ರಿಂದ ಈ ಕಾರ್ಯಕ್ರಮ ಜಾರಿಗೆ ಕೊಡುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಮಾನ್ಯ ಪುಟ್ಟಣ್ಣಯ್ಯನವರೇ, ನಿಮ್ಮ ಅದೃಷ್ಟ ಚೆನ್ನಾಗಿಲ್ಲ. ನಿಮ್ಮ ಪ್ರಶ್ನೆಗೆ ಸರ್ಕಾರ ಸಮಯ ಕೇಳಿದ್ದಾರೆ.

(ಸರ್ಕಾರ ಸಮಯ ಕೇಳಿರುವುದರಿಂದ ಪ್ರಶ್ನೆ ಸಂಖ್ಯೆ 417 (2617)ನ್ನು ಮುಂದೂಡಲಾಗಿದೆ)

ವಿಟ್ಲ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬೆಂಜನಪದವು ಪ್ರದೇಶವನ್ನು ಕೈಗಾರಿಕಾ ಪ್ರದೇಶವಾಗಿ ಮಾಡುವುದು

419 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಟ್ಲ ವಿಧಾನ ಸಭಾಕ್ಷೇತ್ರ ವ್ಯಾಪ್ತಿಯ ಬೆಂಜನಪದವು ಪ್ರದೇಶವನ್ನು ಕೈಗಾರಿಕಾ ಪ್ರದೇಶವಾಗಿ ಮಾಡುವ ಸರ್ಕಾರದ ಯೋಜನೆ ಯಾವ ಹಂತದಲ್ಲಿದೆ?

ಆ) ಇದಕ್ಕೆ ಸ್ಥಳೀಯರಿಂದ ವಿರೋಧ ಇರುವುದು ನಿಜವೆ? ಹಾಗಿದ್ದಲ್ಲಿ ಇದನ್ನು ಕಾರ್ಯಗತ ಮಾಡುವ ಯೋಜನೆ ಸರ್ಕಾರಕ್ಕಿದೆಯೇ?